ಶ್ರೀ ಬಿ. ಬೈರವಾಚಾರಿ.—ಈ ಕೆಲಸ ನಿಧಾನವಾಗಿ 10-15 ವರ್ಷ ಹೋಗಿ ಕೆಲಸ ಮಾಡದೆ ಒಬ್ಬ ರೈತನ ಜಮೀನನ್ನು ಇನ್ನೊಬ್ಬ ರೈತನು ಸಾಗುವಳಿಮಾಡಿ ಅದನ್ನು ತೀರ್ಮಾನ ಮಾಡುವುದ ಕ್ಕಾಗಿ ಕೋರ್ಟ್ ಕಚೇರಿ ಕಚ್ಚೆ ಹತ್ತುವ ಸ್ಥಿತಿ ಬಂದಿದೆ. ಇದನ್ನು ತಪ್ಪಿಸಲು ಆದಷ್ಟು ಬೇಗ ಈ ಕೆಲಸ ಮೊದಲು ಮಾಡಲು ಸರಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಬ್ಬರ ಜಮೀನು ಇನ್ನೊಬ್ಬರು ಮಾಡುವ ಈ ಒಳ್ಳೆ ಗುಣ ರೈತರಲ್ಲಿ ಇದೆ. ಸಾಧ್ಯವಿದ್ದಷ್ಟು ಬೇಗ ಈ ಕೆಲಸ ಮುಗಿಸಲು ಪ್ರಯತ್ನ ಮಾಡುತ್ತೇವೆ.

Grant of Land to Political Sufferers.

*Q.—33. Sri H. D. DEVE GOWDA (Holenarasipur).—

Will the Government be pleased to state :—

(*a*) whether it is fact that four political sufferers have given darkhast applications for the grant of lands in Taragalale and Sulagodu villages in Arkalgud Taluk, Hassan District;

(*b*) if so, the date on which the darkhast applications were submitted to the Taluk Office ;

(*c*) the reasons for not disposing of the same so far;

(*d*) whether they would take action to sanction the same at least now ?

A.—Sri M. V. KRISHNAPPA (Minister for Revenue).—

(*a*) Yes.

(*b*) 15th January 1959.

(*c*) The lands have been granted to them on 25th January 1966.

(*d*) Does not arise in view of the reply to clause(*c*).

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಉಪ ಪ್ರಶ್ನೆಗಳನ್ನು ಕೇಳುವುದಿಲ್ಲ.

Vacancies in Primary Schools.

*Q.—40. Sri S. A. VASANNA SHETTY (Saklespur).—

Will the Government be pleased to state :—

(*a*) the number of vacancies in the various Primary Schools in Saklespur and Alur Taluks at present ;

(*b*) the date from which each of these vacancies are not filled up ?

A.—Sri G. R. KANTHI (Minister for Education).—

(a)— NUMBER OF VACANCIES.

	General Teachers	*Hindi Teachers*
1. Saklespur Taluk	5	8
2. Alur Taluk	1	6

(b)

	General Teachers	*Hindi Teachers*
Saklespur Taluk.	2 vacant from 1-6-65	1 vacant from 7-9-65
	1 ,, ,, 7-6-65	7 ,, 11/64
	1 ,, for last 5 months.	
	1 ,, 1-8-65	
Alur Taluk	1 ,, 28-9-65	6 ,, 11/64

ಶ್ರೀ ಎಸ್. ಎ. ವಾನನ್ನ ಶೆಟ್ಟಿ.—ಉಪಾಧ್ಯಾಯರು ಇಲ್ಲದೇ ಇರತಕ್ಕಂಥ ಸಿಂಗಲ್ ಟೀಚರ್ ಶಾಲೆಗಳು ಎಷ್ಟು ಮುಚ್ಚಿವೆ ?

† ಶ್ರೀ ಎಸ್. ಆರ್. ಕಂಠಿ.—ಸಿಂಗಲ್ ಟೀಚರ್ ನ್ಯೂಲು ಮುಚ್ಚಿದ್ದು ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಒಂದೆರಡು ತಿಂಗಳು ಟೀಚರು ರಜೆಯ ಮೇಲೆ ಹೋದರೆ ಅಂಥ ವೇಕನ್ಸಿಲ್ಲೀ ಎಮೆರ್ಜನ್ಸಿಲ್ಲೀ ಗೋನ್ಸರ ಭರ್ತಿ ಮಾಡಬಾರದು ಎಂದು ಆರ್ಡರ್ ಆಗಿದೆ. ಉಪಾಧ್ಯಾಯರು ರಜೆಯ ಮೇಲೆ ಹೋದ ಕಾಲದಲ್ಲಿ ಪಾಠಶಾಲೆಯಲ್ಲಿ ಪಾಠ ನಷೆನಲು ಅವಕಾಶ ವಿರದ ತೊಂದರೆಯಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ !

ಶ್ರೀ ಎಸ್. ಆರ್. ಕಂಠಿ.—ಉಪಾಧ್ಯಾಯರು ಟೆಂಪರರಿಯಾಗಿ ರಜೆಯ ಮೇಲೆ ಹೋದರೆ ಬೇರೆ ನಬ್ಜೆಕ್ಟ್ ಕಲಿನತಕ್ಕಂಥ ಉಪಾಧ್ಯಾಯರು ಪಾಠ ತೆಗೆದುಕೊಳ್ಳುತ್ತಾರೆ. ಅಲ್ಲದೆ ಬೇರೆ ಟೀಚರ್ ನೇಮಕ ಮಾಡಬೇಕು ಎಂದು ನಿಯಮ ಇದೆ.

ಶ್ರೀ ಎಸ್. ಎ. ವಾನನ್ನ ಶೆಟ್ಟಿ.—ಹಿಂದೀ ಉಪಾಧ್ಯಾಯರ ನೇಮಕ ಮಾಡುವ ಬಗ್ಗೆ ಸರಕಾರದ ನೀತಿ ಏನು ಇದೆ ?

ಶ್ರೀ ಎಸ್. ಆರ್. ಕಂಠಿ.—ಹಿಂದೀ ಉಪಾಧ್ಯಾಯರನ್ನು ನೇಮಕ ಮಾಡಬೇಕೆಂದು ಸರಕಾರದ ವಾಲಿಸಿ ಇದೆ.

ಶ್ರೀ ಬಿ. ಬೈರಪ್ಪಾಜಿ.—ಖಾಲಿ ಇರತಕ್ಕಂಥ ಸ್ಥಾನಗಳನ್ನು ಡಿ. ಈ. ಓ. ಅವರು ನೇಮಕ ಮಾಡುತ್ತಿದ್ದರು. ಆದರೆ ಕಳೆದ ಒಂದು ತಿಂಗಳಿನಿಂದ ಯಾರನ್ನೂ ನೇಮಕ ಮಾಡಬೇಡಿ ಎಂದು ಆದೇಶ ನೀಡಿರುವುದಕ್ಕೆ ಕಾರಣವೇನು ? ಖಾಲಿ ಇರತಕ್ಕಂಥ ಸ್ಥಾನಗಳನ್ನು ಭರ್ತಿ ಮಾಡದೇ ಇರುವುದಕ್ಕೆ ಏನು ಕಾರಣ !

ಶ್ರೀ ಎಸ್. ಆರ್. ಕಂಠಿ.—ಜಿ. ಎ.ಡಿ. ಯಿಂದ ಅಂಥ ಒಂದು ಆರ್ಡರ್ ಹೋಗಿದೆ ಎಂದು ಕೇಳಿದ್ದೇನೆ. ಅದು ಏತಕ್ಕಾಗಿ ಇದೆ ಎಂಬುದು ಗೊತ್ತಿಲ್ಲ. ಅದನ್ನು ತನಿಖೆ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಅಪಾಯಿಂಟ್‌ಮೆಂಟ್ ಮಾಡಕೂಡದು ಎಂದು ಆದೇಶ ಹೋಗಿದೆ ಎಂಬುದು ತಮಗೆ ಗೊತ್ತಾಗಿದೆ. ಇದನ್ನು ವಿಚಾರ ಮಾಡಿ ಖಾಲಿ ಇರತಕ್ಕ ಸ್ಥಾನಗಳನ್ನು ಆದಷ್ಟು ಬೇಗ ಭರ್ತಿ ಮಾಡುವ ಹಾಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆಗಬಹುದು.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಕಲೇಶಪುರ ತಾಲ್ಲೂಕಿನಲ್ಲಿ ಸಂಪೂರ್ಣವಾಗಿ ಎಲ್ಲ ಶಾಲೆಗಳಲ್ಲಿಯೂ ಉಪಾಧ್ಯಾಯರಿದ್ದಾರೆ ಎನ್ನುವ ಕಾಲ ಯಾವತ್ತು ಬರಬಹುದು !

ಶ್ರೀ ಎಸ್. ಆರ್. ಕಂಠಿ.—ಸಕಲೇಶಪುರ ತಾಲ್ಲೂಕಿನಲ್ಲಿ 5 ಜನರಲ್ ಟೀಚರ್ಸ್ ಮತ್ತು 8 ಹಿಂದಿ ಟೀಚರ್ಸ್ ಕಡಮೆ ಇದ್ದಾರೆ. ಜನರಲ್ ಟೀಚರ್ಸ್ ನ್ಯೂಳಗಳಿಗೆ ಯಾರನ್ನು ನೇಮಕ ಮಾಡಿದರೋ ಅವರು ಕೆಲಸಕ್ಕೆ ಸೇರಲಿಲ್ಲ. ಹಿಂದಿ ಟೀಚರ್ಸ್ ಸಾಕಷ್ಟು ಸಂಖ್ಯೆಯಲ್ಲಿ ಇರಲಿಲ್ಲ.

† Indicates that the remarks or speeches have not been revised by the member concerned.

ಶ್ರೀ ಎಸ್. ನುಚ್ಚಯ್ಯ ನಾಯಕ್.—ಒಟ್ಟು 14 ಜನ ಹಿಂದಿ ಉಪಾಧ್ಯಾಯರುಗಳು ಇರಲಿಲ್ಲ ಎಂದು ಹೇಳಿದ್ದಾರೆ? ಹಿಂದಿ ಉಪಾಧ್ಯಾಯರುಗಳಾಗಿ ನೇಮಕ ಮಾಡಲು ಅವರಿಗೆ ಇರಬೇಕಾದ ಕನಿಷ್ಠ ಜನರರ್ ಮತ್ತು ಹಿಂದಿ ಕ್ವಾಲಿಫಿಕೇಷನ್‌ಗಳೇನು?

ಶ್ರೀ ಎಸ್. ಆರ್. ಕಂಠಿ.—ಮಿನಿಮಂ ಕ್ವಾಲಿಫಿಕೇಷನ್ ಎಸ್. ಎಸ್. ಎಲ್. ಸಿ. ಮತ್ತು ಹಿಂದಿಗೆ ಬೇರೆ ಬೇರೆ ಎಗ್ಜಾಮಿನೇಷನ್‌ಗಳನ್ನು ಇಟ್ಟಿದ್ದಾರೆ. ಅದು ಒಂದು ದೊಡ್ಡ ಪಟ್ಟಿ ಇದೆ. ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನು ಕೊಡಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅನೇಕ ತಾಲ್ಲೂಕುಗಳಲ್ಲಿ ಟೆಂಪೊರರಿ ವೇಕೆನ್ಸೀಸ್ ಬೀಳುತ್ತವೆ. ಅನೇಕ ಜನ ಅಭ್ಯರ್ಥಿಗಳು, ಟ್ರೇನಿಂಗ್ ಪಡೆದವರು ಕೆಲಸ ಮಾಡುವುದಕ್ಕೆ ಸಿದ್ಧವಾಗಿರುತ್ತಾರೆ. ಅಂಥವರನ್ನು ಕೆಲಸಕ್ಕೆ ತೆಗೆದುಕೊಂಡು ಟೆಂಪೊರರಿ ವೇಕೆನ್ಸಿಗಳಲ್ಲಿ ನೇರವಾಗಿ ನೇಮಕ ಮಾಡುವುದಕ್ಕೆ ತಾಲ್ಲೂಕು ಇನ್‌ಸ್ಪೆಕ್ಟರುಗಳಿಗೆ ಅವಕಾಶ ಮಾಡಿಕೊಡುತ್ತೀರಾ ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಟೆಂಪೊರರಿ ವೇಕೆನ್ಸಿಗಳು ಬಿದ್ದಾಗ ಅವುಗಳನ್ನು ಭರ್ತಿ ಮಾಡಲು ಕೆಲವು ನಿಯಮಗಳಿವೆ. ಇಂಥ ಸ್ಥಳದಲ್ಲಿ ಖಾಲಿ ಇದ್ದ ಜಾಗವನ್ನು ಭರ್ತಿ ಮಾಡಿಲ್ಲ ಎಂದು ತಿಳಿಸಿದರೆ ಅದನ್ನು ನೋಡೋಣ.

Government Grants to Nursery Schools.

*Q.—127. Sri J. P. SARWESH (Serum).—

Will the Government be pleased to state :—

(*a*) the number of Nursery Schools is Gulbarga District that are getting grants from Government together with the names of these institutions ;

(*b*) what are the rules and conditions for getting Government grants to Nursery Schools in Hyderabad-Karnatak Area ?

A.—Sri S. R. KANTHI (Minister for Education).—

(*a*) One. Nagreshwar Balavikas Mandir, Gulbarga.

(*b*) There are no rules for sanction of grant-in aid to Nursery Schools in Ex-Hyderabad-Karnatak Area.

Grants are, however, sanctioned by Government on *ad hoc* basis where necessary on merits.

Sri J. P. SARWESH.—Are Government aware of the universally accepted necessity of encouraging kindergarten and nursery schools ? If it is accepted, what are the encouragements that Government have given ?

†Sri S. R. KANTHI.—It is the policy of Government to encourage nursery schools as far as possible.

Sri J. P. SARWESH.—Will Government inform the House the merits that determines for giving the *adhoc* grants to these schools ?

Sri S. R. KANTHI.—These nursery schools are run in different areas of the State. In the Hyderabad Karnatak area, there are no rules so far